**All India Radio: Bangalore**
**National Bulletin In Kannada**
**26.03.2025 13.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**26.03.2025 13.10 p.m.**

***************

ಮುಖ್ಯಾಂಶಗಳು

೧. ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾದಿಂದ ಸೌಗತ್-ಎ-ಮೋದಿ ಅಭಿಯಾನ; ದೇಶಾದ್ಯಂತ ೩೨ ಲಕ್ಷ ಹಿಂದುಳಿದ ಮುಸ್ಲೀಮರಿಗೆ ವಿಶೇಷ ಕಿಟ್ ವಿತರಣೆ

೨. ಅಲಹಾಬಾದ್ ಹೈಕೋರ್ಟ್‌ನ ವಿವಾದಾತ್ಮಕ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ

೩. ಭಾರತದ ಸಾಮಾಜಿಕ ಭದ್ರತಾ ವ್ಯಾಪ್ತಿ ೨೦೨೪ರಲ್ಲಿ ಶೇಕಡ ೪೮.೮ ಕ್ಕೆ ಏರಿಕೆ

೪. ಕಪ್ಪು ಸಮುದ್ರದಲ್ಲಿ ಕದನ ವಿರಾಮಕ್ಕೆ ರಷ್ಯಾ - ಉಕ್ರೇನ್ ನಡುವೆ ಸಹಮತ

೫. ಐಪಿಎಲ್ ಟಿ-೨೦ ಕ್ರಿಕೆಟ್; ಇಂದು ರಾಜಸ್ಥಾನ ರಾಯಲ್ಸ್ - ಕೊಲ್ಕತ್ತಾ ನೈಟ್ ರೈಡರ್ಸ್ ಮುಖಾಮುಖಿ

***************

ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಸೌಗತ್-ಎ-ಮೋದಿ ಅಭಿಯಾನವನ್ನು ಪ್ರಾರಂಭಿಸಿದ್ದು, ಈದ್‌ಗೆ ಮುಂಚಿತವಾಗಿ ದೇಶಾದ್ಯಂತ ೩೨ ಲಕ್ಷ ಹಿಂದುಳಿದ ಮುಸ್ಲಿಮರಿಗೆ ವಿಶೇಷ ಕಿಟ್‌ಗಳನ್ನು ವಿತರಿಸುವ ಗುರಿಯನ್ನು ಹೊಂದಿದೆ.

ಬಡ ಮುಸ್ಲಿಂ ಕುಟುಂಬಗಳು ಯಾವುದೇ ತೊಂದರೆಯಿಲ್ಲದೆ ಹಬ್ಬವನ್ನು ಆಚರಿಸಬಹುದೆಂದು ಖಚಿತಪಡಿಸಿಕೊಳ್ಳಲು ಈ ಉಪಕ್ರಮ ಸಹಕಾರಿಯಾಗಲಿದೆ. ಈ ಕುರಿತು ಮಾತನಾಡಿರುವ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ ಜಮಾಲ್ ಸಿದ್ದಿಕಿ, ಪವಿತ್ರ ರಂಜಾನ್ ತಿಂಗಳು ಮತ್ತು ಮುಂಬರುವ ಈದ್, ಗುಡ್ ಫ್ರೈಡೇ, ಈಸ್ಟರ್, ಬೈಶಾಖಿ, ನೌರುಜ್ ಮತ್ತು ಭಾರತೀಯ ಹೊಸ

ವರ್ಷದಂತಹ ಸಂದರ್ಭಗಳಲ್ಲಿ, ಅಲ್ಪಸಂಖ್ಯಾತ ಮೋರ್ಚಾ ಸೌಗತ್-ಎ-ಮೋದಿ ಅಭಿಯಾನದ ಮೂಲಕ ಅಗತ್ಯವಿರುವವರನ್ನು ತಲುಪಲಿದೆ ಎಂದು ಹೇಳಿದರು. ಅಭಿಯಾನದ ಭಾಗವಾಗಿ, ೩೨ ಸಾವಿರ ಅಲ್ಪಸಂಖ್ಯಾತ ಮೋರ್ಚಾ ಕಾರ್ಯಕರ್ತರು ದೇಶಾದ್ಯಂತ ೩೨ ಸಾವಿರ ಮಸೀದಿಗಳೊಂದಿಗೆ ಸಹಕರಿಸಿ ಅಗತ್ಯವಿರುವವರನ್ನು ತಲುಪಲಿದ್ದಾರೆ ಎಂದು ಅವರು ಹೇಳಿದರು.

ಧ್ವನಿ: ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ ಜಮಾಲ್ ಸಿದ್ದಿಕಿ ( ೨೪ ಸೆಕೆಂಡ್‌ಗಳು )

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಅಲ್ಪಸಂಖ್ಯಾತ ಮೋರ್ಚಾದ ಉಸ್ತುವಾರಿ ದುಷ್ಯಂತ್ ಕುಮಾರ್ ಗೌತಮ್ ಅವರು ರಾಷ್ಟ್ರ ರಾಜಧಾನಿಯ ಹಜರತ್ ನಿಜಾಮುದ್ದೀನ್ ಪ್ರದೇಶದಲ್ಲಿ ಸೌಗತ್-ಎ-ಮೋದಿ ಅಭಿಯಾನದಡಿಯಲ್ಲಿ ಕಿಟ್‌ಗಳನ್ನು ವಿತರಿಸಿದರು.

***************

ಅಲಹಾಬಾದ್ ಹೈಕೋರ್ಟ್‌ನ ವಿವಾದಾತ್ಮಕ ಆದೇಶವನ್ನು ಸುಪ್ರೀಂ ಕೋರ್ಟ್ ತಡೆ ಹಿಡಿದಿದೆ. ಅಲಹಬಾದ್ ಹೈಕೋರ್ಟ್ ತೀರ್ಪು "ಸೂಕ್ಷ್ಮತೆಯ ಕೊರತೆ"ಯನ್ನು ತೋರಿಸಿದೆ ಎಂದು ನ್ಯಾಯಾಲಯ ಹೇಳಿದೆ.

ಮಹಿಳೆಯ ಮೈ ಮುಟ್ಟುವುದು, ಅತ್ಯಾಚಾರದ ಪ್ರಯತ್ನವಲ್ಲ ಎಂಬ ಅಲಹಾಬಾದ್ ಹೈಕೋರ್ಟ್‌ನ ವಿವಾದಾತ್ಮಕ ಆದೇಶ ಸರಿಯಲ್ಲ ಎಂದು ತೀರ್ಪು ನೀಡಿದೆ.

'ನಾವು ಭಾರತದ ಮಹಿಳೆಯರು' ಎಂಬ ಸಂಘಟನೆಯು ಅಲಹಾಬಾದ್ ಹೈಕೋರ್ಟ್‌ನ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಬಳಿಕ ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತವಾಗಿ ಪ್ರಕರಣವನ್ನು ಪರಿಗಣಿಸಿತು. ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಬಿ.ಆರ್.ಗವಾಯಿ ಮತ್ತು ಆಗಸ್ಟೀನ್ ಜಾರ್ಜ್ ಮಸಿಹ್ ಅವರಿದ್ದ ಪೀಠವು, ಈ ತೀರ್ಪು ಹೈಕೋರ್ಟ್ ನ್ಯಾಯಾಧೀಶರ ಕಡೆಯಿಂದ ಸೂಕ್ಷ್ಮತೆಯ ಕೊರತೆಯನ್ನು ತೋರಿಸಿದೆ ಎಂದು ಅಭಿಪ್ರಾಯಪಟ್ಟಿದೆ.

***************

೨೦೨೧ ರಲ್ಲಿ ಶೇಕಡ ೨೪.೪ ರಷ್ಟಿದ್ದ ಭಾರತದ ಸಾಮಾಜಿಕ ಭದ್ರತಾ ವ್ಯಾಪ್ತಿ ಗಣನೀಯವಾಗಿ ವಿಸ್ತರಿಸಿದ್ದು, ೨೦೨೪ರಲ್ಲಿ ಶೇಕಡ ೪೮.೮ ರಷ್ಟಿಗೆ ತಲುಪಿದೆ. 'ಸಾರ್ವಜನಿಕ ಹೂಡಿಕೆ' ವಿಷಯದ ಮೇಲೆ ನಿನ್ನೆ ನಡೆದ ಆಯ-ವ್ಯಯ ನಂತರದ ವೆಬಿನಾರ್‌ನಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ವಿಶ್ವ ಸಾಮಾಜಿಕ ಭದ್ರತಾ ವರದಿ ೨೦೨೪-೨೬ ಅನ್ನು ಉಲ್ಲೇಖಿಸಿ ಕೇಂದ್ರ ಸಚಿವ ಮನ್ಸೂಖ್ ಮಾಂಡವೀಯ ಈ ವಿಷಯ ತಿಳಿಸಿದ್ದಾರೆ.

ಯುವಕರ ಕೌಶಲ್ಯಾಭಿವೃದ್ಧಿ ಮತ್ತು ಸಬಲೀಕರಣಕ್ಕೆ ಸರ್ಕಾರದ ಬದ್ಧತೆಯನ್ನು ಒತ್ತಿ ಹೇಳಿದ ಅವರು, ಯುವಕರ ಪ್ರತಿಭೆಯನ್ನು ಗುರುತಿಸಿ ಪೋಷಿಸುವುದು ಜಾಗತಿಕವಾಗಿ ಪರಿಣಾಮ ಬೀರುತ್ತದೆ. ೨೦೧೪ ರಿಂದ ೨೦೨೪ ರ ನಡುವೆ ೧೮ ಕೋಟಿ ೧ ಲಕ್ಷ ಉದ್ಯೋಗಗಳು ಸೃಷ್ಟಿಯಾಗಿದ್ದು, ಕಳೆದ ಒಂದು ವರ್ಷದಲ್ಲೇ ೪ ಕೋಟಿ ೬ ಲಕ್ಷ ಉದ್ಯೋಗಳು ಸೃಷ್ಟಿಯಾಗಿವೆ.

****************

ಸೌದಿ ಅರೇಬಿಯಾದಲ್ಲಿ ಮೂರು ದಿನಗಳ ಕಾಲ ನಡೆದ ಮಾತುಕತೆಗಳ ಬಳಿಕ ರಷ್ಯಾ ಹಾಗೂ ಉಕ್ರೇನ್ ಕಪ್ಪು ಸಮುದ್ರದಲ್ಲಿ ನೌಕಾ ಕದನ ವಿರಾಮಕ್ಕೆ ಒಪ್ಪಿಗೆ ಸೂಚಿಸಿವೆ ಎಂದು ಅಮೆರಿಕ ತಿಳಿಸಿದೆ.

ಶ್ವೇತ ಭವನದ ಹೇಳಿಕೆಯ ಪ್ರಕಾರ ಉಭಯ ರಾಷ್ಟ್ರಗಳು ಸುರಕ್ಷತಾ ಸಾಗಣೆ ಖಚಿತಪಡಿಸಲು, ಬಲಪ್ರಯೋಗ ನಿಯಂತ್ರಿಸಲು ಮತ್ತು ಮಿಲಿಟರಿ ಉದ್ದೇಶಗಳಿಗಾಗಿ ವಾಣಿಜ್ಯ ಹಡಗುಗಳ ಬಳಕೆಯನ್ನು ತಡೆಯಲು ಒಮ್ಮತ ವ್ಯಕ್ತಪಡಿಸಿವೆ. ಈ ನೂತನ ಒಪ್ಪಂದದ ಮೂಲಕ ರಷ್ಯಾದ ಕೃಷಿ ಮತ್ತು ರಸಗೊಬ್ಬರ ರಫ್ತಿಗೆ ಜಾಗತಿಕ ಮಾರುಕಟ್ಟೆಗೆ ಪ್ರವೇಶ ಪುನರ್ ಸ್ಥಾಪಿಸಲು ಸಹಕಾರಿಯಾಗಲಿದೆ.

ಹೇಳಿಕೆಯೊಂದರಲ್ಲಿ ಸಮುದ್ರದಲ್ಲಿ ಶಾಂತಿ ಮತ್ತು ಮುಕ್ತ ಸಂಚಾರ ಕುರಿತಂತೆ ಒಪ್ಪಿಗೆ ಸೂಚಿಸಲಾಗಿದೆ ಎಂದಿರುವ ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಜಲೆನ್ಸ್ಕಿ , ಮೂರು ವರ್ಷಗಳ ಹಿಂದಿನ ಯುದ್ಧದ ಶಾಂತಿಯುತ ಇತ್ಯರ್ಥಕ್ಕೆ ಈ ಮಾತುಕತೆಗಳು ಉತ್ತಮ ಆರಂಭಿಕ ಹೆಜ್ಜೆಗಳಾಗಿವೆ ಎಂದು ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

ಉಭಯ ರಾಷ್ಟ್ರಗಳ ನಡುವೆ ಶಾಂತಿ ಸ್ಥಾಪನೆ ಕುರಿತಂತೆ ಸಾಕಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

***************

ಆಹಾರ ಕಲಬೆರಕೆಯ ದೂರುಗಳ ವಿರುದ್ಧ ಸರ್ಕಾರ ಕಠಿಣ ಮತ್ತು ತ್ವರಿತ ಕ್ರಮ ಕೈಗೊಳ್ಳುತ್ತದೆ ಎಂದು ಕೇಂದ್ರ ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ.

ಲೋಕಸಭೆಯಲ್ಲಿಂದು ಪೂರಕ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವರು, ಆಹಾರ ಕಲಬೆರಕೆಯ ದೂರುಗಳು ಬಂದ ತಕ್ಷಣ ಸರ್ಕಾರ ವಿಚಾರಣೆ ನಡೆಸುತ್ತದೆ ಮತ್ತು ಆಹಾರ ಪದಾರ್ಥಗಳು ಮಾನವ ಬಳಕೆಗೆ ಯೋಗ್ಯವಾಗಿಲ್ಲದಿದ್ದರೆ ಕ್ರಿಮಿನಲ್ ಮೊಕದ್ದಮೆ ಹೂಡುತ್ತದೆ ಎಂದು ಹೇಳಿದರು.

ವಿವಿಧ ಆಹಾರ ಸರಕುಗಳ ಪರೀಕ್ಷೆಗಾಗಿ, ಈSS◌ಂI ದೇಶಾದ್ಯಂತ ೨೪೨ ಪ್ರಯೋಗಾಲಯಗಳು, ನಾಲ್ಕು ಉಲ್ಲೇಖಿತ ಪ್ರಯೋಗಾಲಯಗಳು ಮತ್ತು ಮೊಬೈಲ್ ಆಹಾರ ಪರೀಕ್ಷಾ ಪ್ರಯೋಗಾಲಯಗಳನ್ನು ಹೊಂದಿದೆ. ರಾಷ್ಟ್ರೀಯ ಗ್ರಾಹಕ ಸಹಾಯವಾಣಿ ಗ್ರಾಹಕರ ರಕ್ಷಣೆಗೆ ಒಂದು ದೊಡ್ಡ ಸಾಧನವಾಗಿದೆ ಎಂದು ಹೇಳಿದರು.

ಧ್ವನಿ: ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ (೨೦ ಸೆಕೆಂಡ್‌ಗಳು)

***************

ಭಾರತ ಭೇಟಿಯಲ್ಲಿರುವ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರ ವಿಶೇಷ ಪ್ರತಿನಿಧಿ ಜೂಲಿ ಬಿಷಪ್ ನವದೆಹಲಿಯಲ್ಲಿ ನಿನ್ನೆ  ಮ್ಯಾನ್ಮಾರ್‌ನಲ್ಲಿ ಪ್ರಸಕ್ತ ವಿದ್ಯಮಾನಗಳ ಕುರಿತು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಅವರೊಂದಿಗೆ ಮಾತುಕತೆ ನಡೆಸಿದರು.

ಕಳೆದ ವರ್ಷ ಏಪ್ರಿಲ್‌ನಲ್ಲಿ, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಬಿಷಪ್ ಅವರನ್ನು ಮ್ಯಾನ್ಮಾರ್‌ಗೆ ತಮ್ಮ ವಿಶೇಷ ರಾಯಭಾರಿಯಾಗಿ ನೇಮಿಸಿದ್ದರು. ೨೦೨೧ ರ ಫೆಬ್ರವರಿ ೧ ರಂದು ನಡೆದ ದಂಗೆಯಲ್ಲಿ ಮಿಲಿಟರಿ ಅಧಿಕಾರವನ್ನು ವಶಪಡಿಸಿಕೊಂಡಾಗಿನಿಂದ ಪ್ರಜಾಪ್ರಭುತ್ವದ ಪುನಃಸ್ಥಾಪನೆಗೆ ಒತ್ತಾಯಿಸಿ ಮ್ಯಾನ್ಮಾರ್ ವ್ಯಾಪಕ ಹಿಂಸಾತ್ಮಕ ಪ್ರತಿಭಟನೆಗಳಿಗೆ

ಸಾಕ್ಷಿಯಾಗಿದೆ. ಭಾರತ, ಚೀನಾ ಮತ್ತು ಬಾಂಗ್ಲಾದೇಶದ ಗಡಿಗಳಲ್ಲಿ ಪ್ರತಿರೋಧ ಪಡೆಗಳು ಈಗಾಗಲೇ ಅನೇಕ ಪ್ರಮುಖ ವ್ಯಾಪಾರ ಕೇಂದ್ರಗಳನ್ನು ವಶಪಡಿಸಿಕೊಂಡಿವೆ.

****************

ಚಿನ್ನದ ನಗದೀಕರಣ ಯೋಜನೆ - ಜಿಎಂಎಸ್ ಅಡಿ ಮಧ್ಯಮ ಮತ್ತು ದೀರ್ಘಾವಧಿಯ ಸರ್ಕಾರಿ ಠೇವಣಿಗಳನ್ನು ಕೇಂದ್ರ ಸರ್ಕಾರ ಇಂದಿನಿಂದ ಸ್ಥಗಿತಗೊಳಿಸಲಿದೆ. ಈ ಯೋಜನೆಯ ಕಾರ್ಯಕ್ಷಮತೆ ಮತ್ತು ಮಾರುಕಟ್ಟೆ ಪರಿಸ್ಥಿತಿಯ ಪರಿಶೀಲನೆ ನಂತರ ಈ ಕ್ರಮ ಕೈಗೊಳ್ಳಾಗಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

ಗೊತ್ತುಪಡಿಸಿದ ಸಂಗ್ರಹ ಮತ್ತು ಶುದ್ಧತೆ ಪರೀಕ್ಷಾ ಕೇಂದ್ರಗಳು ಅಥವಾ ಜಿಎಮ್‌ಎಸ್ ಏಜೆಂಟ್ ಮತ್ತು ಘಟಕಗಳ ಅಡಿಯಲ್ಲಿ ಗೊತ್ತುಪಡಿಸಿದ ಬ್ಯಾಂಕ್ ಶಾಖೆಗಳಲ್ಲಿರುವ ಯಾವುದೇ ಚಿನ್ನದ ಠೇವಣಿಗಳನ್ನು ಇಂದಿನಿಂದ ಸ್ವೀಕರಿಸಲಾಗುವುದಿಲ್ಲ ಎಂದು ಸಚಿವಾಲಯ ತಿಳಿಸಿದೆ.

ಆದರೆ ಜಿಎಂಎಸ್ ಅಡಿಯ ಈಗಾಗಲೇ ಅಸ್ಥಿತ್ವದಲಿರುವ ಮಧ್ಯಮ ಮತ್ತು ದೀರ್ಘಾವಧಿಯ ಸರ್ಕಾರಿ ಠೇವಣಿಗಳು ಮಾರ್ಗಸೂಚಿಗಳ ಪ್ರಕಾರ ಠೇವಣಿ ಅವಧಿ ಮುಕ್ತಾಯದವರೆಗೆ ಮುಂದುವರೆಯಲಿವೆ.

****************

ಮೂಲಭೂತ ಹಂತದಲ್ಲಿ ಚಿಕ್ಕ ಮಕ್ಕಳಿಗೆ ಉತ್ತಮ ಕಲಿಕೆ ಒದಗಿಸುವ ಗುರಿಯೊಂದಿಗೆ ಕೇಂದ್ರ ಶಿಕ್ಷಣ ಸಚಿವಾಲಯ ಜಾರಿಗೊಳಿಸಿರುವ 'ಬಾಲ್ಪನ್ ಕಿ ಕವಿತಾ; ಚಿಕ್ಕ ಮಕ್ಕಳಿಗಾಗಿ ಭಾರತೀಯ ಚಿಣ್ಣರ ಪದ್ಯಗಳನ್ನು ಮರುಸ್ಥಾಪಿಸುವುದು' ಹೆಸರಿನ ಉಪಕ್ರಮ ಇಂದಿನಿಂದ ಆರಭವಾಗಲಿದೆ.

ಇದು ಅವರ ಮಾತೃಭಾಷೆಯಲ್ಲಿ ಸುಲಭವಾಗಿ ಅರ್ಥವಾಗುವ ಮತ್ತು ಸಂತೋಷದಾಯಕ ಕವಿತೆಗಳು ಮತ್ತು ಚಿಣ್ಣರ ಪದ್ಯಗಳ ಮೂಲಕ ಮಕ್ಕಳಿಗೆ ಜಗತ್ತಿನ ಪರಿಚಯ ಮಾಡಿಕೊಡುವ ಗುರಿಯನ್ನು ಹೊಂದಿದೆ.

****************

ಉದ್ಯೋಗಿಗಳ ರಾಜ್ಯ ವಿಮಾ ನಿಗಮ-ಇಎಸ್ಐಸಿ ಉತ್ತರ ಪ್ರದೇಶದಲ್ಲಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿದೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಡಾ. ಮನ್ಸುಖ್ ಮಾಂಡವಿಯಾ ಘೋಷಿಸಿದ್ದಾರೆ.

****************

ಗುವಾಹಟಿಯಲ್ಲಿಂದು ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ -ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಹಾಗೂ ಕೊಲ್ಕತ್ತಾ ನೈಟ್ ರೈಡರ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ ಕ್ಕೆ ಆರಂಭವಾಗಲಿದೆ.

****************

ಶಿಲಾಂಗ್‌ನಲ್ಲಿ ನಿನ್ನೆ ರಾತ್ರಿ ನಡೆದ ಭಾರತ ಹಾಗೂ ಬಾಂಗ್ಲಾದೇಶ ತಂಡ ನಡುವಿನ ಎಎಫ್‌ಸಿ ಏಷ್ಯನ್ ಕಪ್-೨೦೨೭ ಫುಟ್‌ಬಾಲ್ ಪಂದ್ಯಾವಳಿಯ ಅರ್ಹತಾ ಸುತ್ತಿನ ಅಂತಿಮ ಹಂತದ ಪಂದ್ಯ ಡ್ರಾನಲ್ಲಿ ಅಂತ್ಯಗೊಂಡಿದೆ.

****************

ಮಹಿಳಾ ವಿಶ್ವಕಪ್ ಕ್ರಿಕೆಟ್-೨೦೨೫ ಅರ್ಹತಾ ಸುತ್ತಿನ ಪಂದ್ಯಗಳ ಸಂಪೂರ್ಣ ವೇಳಾಪಟ್ಟಿಯನ್ನು ಅಂತಾರಾಷ್ಟ್ರೀಯ ಕ್ರಿಕೆಟ್ ಸಮಿತಿ ಐಸಿಸಿ ಪ್ರಕಟಿಸಿದೆ.

ಪಾಕಿಸ್ತಾನದ ಲಾಹೋರ್‌ನಲ್ಲಿ ಏಪ್ರಿಲ್ ೯ ರಿಂದ ಈ ಪಂದ್ಯಾವಳಿಗೆ ಚಾಲನೆ ದೊರೆಯಲಿದ್ದು, ಪಾಕಿಸ್ತಾನ, ವೆಸ್ಟ್ ಇಂಡೀಸ್, ಬಾಂಗ್ಲಾದೇಶ, ಐರ್ಲೆಂಡ್ ಸ್ಕಾಟ್‌ಲ್ಯಾಂಡ್ ಹಾಗೂ ಥೈಲ್ಯಾಂಡ್ ತಂಡಗಳು ಸೆಣಸಾಟ ನಡೆಸಲಿವೆ.

********ಮುಕ್ತಾಯ********